ಶಿಗ್ಗಾಂವ್ ತಾಲ್ಲೂಕ ಬಾಡ- ಬಂಕಾಪುರ ರಸ್ತೆ ಸುಧಾರಣೆ

587 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಶಿಗ್ಗಾಂವ ತಾಲ್ಲೂಕು ಬಾಡ ಗ್ರಾಮ (ಸಂತ ಕನಕದಾಸ ಹುಟ್ಟಿದ ಸ್ಥಳ) ದಿಂದ ಬಂಕಾಪುರದವರೆಗೆ 6 ಕಿ.ಮೀ. ರಸ್ತೆ ಡಾಂಬರೀಕರಣ ಮಾಡಲಾಗುವುದೇ*

ಆ) *ಸಂತ ಕನಕದಾಸ ಪೀಠ ಕಾಗಿನೆಲೆಯಿಂದ ಬ್ಯಾಡಗಿವರೆಗೆ ಎಷ್ಟು ಕಿ.ಮಿ.ಡಾಂಬರು ರಸ್ತೆ ಮಾಡಲಾಗಿದೆ.*

ಇ) *ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಸದರಿ ಬಾಡ-ಬಂಕಾಪುರ ರಸ್ತೆ ಕೈಗೆತ್ತಿಕೊಳ್ಳಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಈ ರಸ್ತೆಯ 6 ಕಿ.ಮೀ. ಉದ್ದದಲ್ಲಿ 1 ಕಿ.ಮೀ.ಉದ್ದಕ್ಕೆ ಡಾಂಬರೀಕರಣ ಮಾಡಲಾಗಿದೆ. 2.50 ಕಿ.ಮೀ. ಉದ್ದಕ್ಕೆ 4.00 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರೀಕರಣ ಮಾಡುವ ಪ್ರಸ್ತಾಪ ಇರುತ್ತದೆ.

ಆ) *ಕಾಗಿನೆಲೆಯಿಂದ ಬ್ಯಾಡಗಿವರೆಗೆ ಒಟ್ಟು 17 ಕಿ.ಮೀ. ಉದ್ದವಿದ್ದು ಒಟ್ಟು 5. ಕಿ.ಮೀ. ಡಾಂಬರೀಕರಣವಾಗಿದೆ. 5 ಕಿ.ಮೀ. ಉದ್ದಕ್ಕೆ ಡಾಂಬರೀಕರಣಕ್ಕಾಗಿ ಗುತ್ತಿಗೆಯನ್ನು ಆಹ್ವಾನಿಸಲಾಗಿದೆ.*

ಇ) *ಸದರಿ ರಸ್ತೆಯ 2.50 ಕಿ.ಮೀ.ಉದ್ದಕ್ಕೆ ಡಾಂಬರೀಕರಣ ಮಾಡುವುದಕ್ಕೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಅಂದಾಜು ಸಲ್ಲಿಸಿದ್ದು, ಅದು ಅನುಮೋದನೆಯಾದ ನಂತರ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು. ಉಳಿದ 2.5 ಕಿ.ಮೀ. ಉದ್ದದ ರಸ್ತೆಯ ಡಾಂಬರೀಕರಣವನ್ನು ಅನುದಾನ ಲಭ್ಯತೆಯನ್ನು ಅನುಸರಿಸಿ ಮುಂದಿನ ಸಾಲಿನಲ್ಲಿ ಪರಿಗಣಿಸಲಾಗುವುದು.*

ತುಂಗಾ ಎಡದಂಡೆ ನಾಲೆ ದುರಸ್ಥಿ

100-ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ತುಂಗಭದ್ರಾ ಎಡದಂಡೆ ನಾಲೆ ಇತ್ತೀಚೆಗೆ ಒಡೆದಿರುವುದರಿಂದ ನಾಲೆ ದುರಸ್ಥಿಗೆ ತಗಲುವ ವೆಚ್ಚವನ್ನು ಅಂದಾಜು ಮಾಡಲಾಗಿದೆಯೇ?*

ಆ) *ಅಂದಾಜು ಮಾಡಿದ್ದಲ್ಲಿ ಮಂಜೂರಾದ ಹಣವೆಷ್ಟು ಮತ್ತು ಬಿಡುಗಡೆಯಾದ ಹಣ ಎಷ್ಟು?*

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ತಾತ್ಕಾಲಿಕ ದುರಸ್ಥಿ ರೂ. 14.90 ಲಕ್ಷಗಳು
ಪುನರ್ ನಿರ್ಮಾಣಕ್ಕಾಗಿ ರೂ. 86.80 ಲಕ್ಷಗಳು
ಬಿಡುಗಡೆ ಆಗಿರುವ ಹಣ ರೂ. 84.00 ಲಕ್ಷಗಳು

ಭದ್ರಾ ಅಣೆಕಟ್ಟಿನ ನಾಲೆಯ ದುರಸ್ತಿ

100 ಎ - ಶ್ರೀ ಡಿ.ಬಿ. ಚಂದ್ರೇಗೌಡ. (ತೀರ್ಥಹಳ್ಳಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಭದ್ರಾ ಅಣೆಕಟ್ಟಿನ ನಾಲೆಯ ಪ್ರವೇಶ ದ್ವಾರ ಒಡೆದು ಹೋಗಿದ್ದು, ಇದರ ದುರಸ್ಥಿ ಕಾರ್ಯ ಯಾವ ಹಂತದಲ್ಲಿದೆ?*